ರಜಿಯಾ. ತಕ್ಷಣ ನನ್ನ ಬದಿ ತಿರುಗಿದ ಮೇಡಂ, 'ಯಾಕೆ ನಿಮ್ಗೆ ಬೇಡ್ವೆ?' ಕೇಳಿದ್ರು. 'ಹೌದು, ಆ ಬಿಲ್ಲಿನ ಕುರಿತು ನನ್ನ ಗಂಡ ನೆನಪಿಸುತ್ತಿದ್ದ' ಅಂದೆ ನಾನೂ. 'ಮೇಡಂ ಸೈನ್ ಮಾಡಿಸಿ ಇವತ್ತೇ ಡಿ.ಸಿ. ಚೇಂಬರಿಗೆ ಕಳಿಸುವೆ' ಅಂದರು ಅದೇ ಚಿಂತಾಕ್ರಾಂತ ಶೈಲಿಯಲ್ಲೇ ಶಶಿರೇಖಾ. ಅಷ್ಟರಲ್ಲಿ ಸಿದ್ದು ನಿಧಾನ ಒಳಬಂದು, 'ಇವ್ರು ಒಳಗ ಇದ್ರೆ ಅವ್ರು ಒಳಗೆ ಬರಂಗಿಲ್ಲಂತ್ರಿ ಮೇಡಂ' ಅಂತ ಹೇಳಿದ್ದೇ ತಡ ನಾನೇ ಹೊರ ಎದ್ದು ಹೋಗಿದ್ದೆ. ಕಾರಿನ ಬಳಿ ಹೋಗಿ ಮುಖ ಆಚೆ ತಿರುಗಿಸಿ ನಿಂತಿದ್ದ ಹಮೀದ್. ಮೆಟ್ಟಿಲಿಳಿದು ಅಲ್ಲಿಯೇ ಹೋದೆ. 'ಏನೂ ಅಪಾಯ ಇಲ್ಲ, ನಾವೆಲ್ಲ ಇದ್ದೇವೆ, ಕೆಟ್ಟದ್ದು ಘಟಿಸದೇ ಇರುವ ಹಾಗೇ ನೋಡಿಕೊಳ್ಳೋದೇ ನಮ್ಮ ಕಮಿಟಿಯ ಕೆಲಸ. ಕಟ್ಟ ಕಡೇ ಒಂದೇ ಒಂದು ಮಾತು ಬಾಕಿ ಇದೆ, ಅದನ್ನು ಮುಗಿಸಿಕೊಂಡು ಹೋಗಿಬಿಡ್ರಿ. ನಿಮಗೂ ಒಂದು ಕ್ಲಿಯರ್ ಆಕ್ಕೇತಿ, ನಮಗೂ ಲೇಟ್ ಆಯ್ತು' ಅಂತ ಒತ್ತಾಯಿಸಿದೆ. 'ಹಾಗಲ್ಲ ಮೇಡಂ, ಅದಕ್ಕಲ್ಲ' ಅಂತೆನೋ ಹಮೀದ್ ಚಡಪಡಿಸಿದ. ಕಾರಿನೊಳಗೆ ಕೂತ ವ್ಯಕ್ತಿಯೊಡನೆ ಏನನ್ನೋ ಪಿಸುದನಿಯಲ್ಲಿ ಮಾತಾಡಿದ. ಆತನೂ ಇಳಿದು ಹಮೀದನ ಜೊತೆಯಲ್ಲೇ ಬಂದ. ಸಬೀನಾಗೆ ಭಯಗೊಂಡು ಜೊತೆಯಲ್ಲಿರಲಿ ಅಂತ ಕಾರಿನ ಡ್ರೈವರನ್ನು ಕರೆದಿರಬಹುದು ಅಂತ ಭ್ರಮಿಸಿದೆ. ಇಬ್ಬರೂ ನನ್ನ ಹಿಂದೆಯೇ ಕೊಠಡಿಯ ಒಳಬಂದರು. ಈಗ ಮೇಡಂ ಅವನತ್ತ ತಿರುಗಿ, 'ಹಮೀದ್ ಅವರೇ, ನೀವು ನೋಡಿದರೆ ತನ್ನ ಮದ್ವೆ ಆಗಿದೆ ಮಕ್ಕಳಿವೆ ಅಂತಿರಿ, ಅವಳು ನೋಡಿದರೆ ನಿಮಗೆ ಮದುವೆಯೇ ಆಗಿಲ್ಲ ಅಂತಾಳೆ, ಯಾರಾದರೊಬ್ಬರು ಸುಳ್ಳು ಹೇಳುತ್ತಿರಲೇ ಬೇಕಲ್ಲವೇ?' ಅಂತ ಕೇಳಿದರು. ಬಿಳಿಚಿಕೊಳ್ಳುತ್ತ ನಿಂತ ಆತ, 'ನನ್ನದು ನನ್ನದು ಮದ್ವೆ ಆಗಿದೆ ಮೇಡಂ' ತಡವರಿಸುತ್ತ, ಬೆವರೊರೆಸಿಕೊಳ್ಳುತ್ತ ದೈನ್ಯದ ದನಿಯಲ್ಲಿ ಮೇಡಂ ಹತ್ತಿರ ತಲೆ ಬಗ್ಗಿಸಿ ನಿಂತು, 'ಕ್ಷಮಿಸಿ ಮೇಡಂ, ತಪ್ಪಾಗಿದೆ, ಹೊಟ್ಟೆಯೊಳಗೆ ಹಾಕ್ಕೊಳಿ, ಅಣ್ಣನಿಗೆ ಕನ್ನಡ ಸರೀ ಬರೂದಿಲ್ಲ ಅಂತ ಬೆಳಗ್ಗೆಯಿಂದ ಅವನ ಮಾತನ್ನು ನಾನೇ ಆಡಿದೆ' ಅನ್ನುತ್ತ ಕೈಮುಗಿದಿದ್ದ. ಅವನು ಏನು ಹೇಳುತ್ತಿದ್ದಾನೆ ಅಂತ ನಮಗಂತೂ ಆ ಕ್ಷಣ ಅರ್ಥವಾಗಲಿಲ್ಲ.

ಒಮ್ಮೆಲೇ ಅಚ್ಚರಿ ತುಂಬಿದ ಮುಖ ಚಹರೆಯಲ್ಲಿ ಮೇಡಂ, 'ಯಾಕಪ್ಪ, ನಿನಗೆ ಕನ್ನಡ ಶುದ್ಧವಾಗೇ ಬರ್ತದಲ್ಲ?' ಅಂತ ಕೇಳಿದ್ದಕ್ಕೆ ಎದುರು ಕೂತ ಸಬೀನಾ, 'ಇಲ್ಲ ಮೇಡಂ, ಹಿಂದುಗಡೆ ನಿಂತ ಇವರು ಬಿಳಿಯ ಶರ್ಟಿನವರು ಹಮೀದ್, ಅವರು ಇವರ ತಮ್ಮ ಸಲೀಮ್ ಬಾಯಿ' ಅಂದಳು. ಮೇಡಂ ಜೊತೆ ನಾವು ಮೂವರೂ ಚೇಳು ಕುಟುಕಿಸಿಕೊಂಡವರಂತೆ ಒಮ್ಮೆಲೇ ಕುರ್ಚಿ ಬಿಟ್ಟೇ ಎದ್ದುನಿಂತೆವು. 'ಅಬ್ಬಾ! ಏನ್ರೀ ನಿಮ್ದು? ಹುಡುಗಾಟ ಆಡ್ತೀರೇನ್ರೀ ನಮ್ಮ ಹತ್ರ? ಆಗ ನಿಮ್ಮ ಜೊತೆ ಬಂದವ ಯಾರು ಅಂತ ಕೇಳಿದ್ದಕ್ಕೆ ಕಾರಿನ ಡ್ರೈವರ್ ಅಂದ್ರಿ. ನಮಗೇ ಮೋಸ ಮಾಡ್ತೀರ, ನಿಮ್ಮ ಮೇಲೆ ಸಬೀನಾ ಅಷ್ಟೇ ಅಲ್ಲ, ನಾವೂ ಒಂದು ಕೇಸು ಜಡೀದೇ ಬಿಡೊಲ್ಲ' ಎನ್ನುತ್ತ ಮೇಡಂ ಕೆಂಡಾಮಂಡಲವಾಗಿ ಕೂಗಾಡುತ್ತ ಕೂತರು. 'ಬೆಳಗಿನಿಂದ ಮಾಡಿದ್ದೆಲ್ಲ ಬರಿ ನಾಟಕವಾಯ್ತಲ್ಲ' ಅನ್ನುತ್ತ ರಜಿಯಾ ಕೂತರೆ, 'ವರದಿಯಲ್ಲಿ ಇದನ್ನೂ ಮೆನ್ಶನ್ ಮಾಡಿ ಶಶಿರೇಖಾ' ಅನ್ನುತ್ತ ವಿರಮಿಸಿದರು ಡೇಸಿ. ನಾನು, 'ಎಲ್ಲಾ ಉಲ್ಟಾ ಆಯ್ತಲ್ಲ' ಅಂತ ನಸುನಗುತ್ತ ಕೂತೆ. ಈಗ ಮೇಡಂ, 'ರೀ ಶಶಿರೇಖಾ, ಇವರ ಮೋಸಕ್ಕೆ ಒಂದು ಕಂಪ್ಲೆಂಟ್ ಟೈಪ್ ಮಾಡಿಸಿ. ವಿಚಾರಣಾ ಕಮಿಟಿಯನ್ನೇ ವಂಚಿಸ್ತಾರೆ ಅಂದ್ರೆ, ಎಷ್ಟು ಗಮಿಂಡು ನೋಡಿ. ಈ ಬಡಪಾಯಿ ಸಬೀನಾ ಯಾವ ಲೆಕ್ಕ ಇವರಿಗೆ' ಅವರ ಗಡುಸಾದ ದನಿಗೆ ನಾವೂ ಕ್ಷಣ ಬೆಚ್ಚಿಬಿದ್ದೆವು.

'ಮೇಡಂ ತಪ್ಪಾಗೈತಿ ಹೊಟ್ಯಾಗ ಹಾಕ್ಕೋಳ್ರಿ' ಅನ್ನುತ್ತ ಇನ್ನೂ ನಿಂತಿದ್ದ ಸಲೀಮನನ್ನು ಮೇಡಂ ಉಕ್ಕುತ್ತಿದ್ದ ಕೋಪದಿಂದ, 'ಏ ಹೋಗಪ್ಪ ಆಚೆ, ನನ್ನ ಕಣ್ಣೆದುರು ನಿಂತ್ಕೋಬೇಡ, ಗೆಟ್ ಲಾಸ್ಟ್' ಎಂದು ಚೀರಿಕೊಂಡಂತೆ ಹೇಳಿದ್ದಕ್ಕೆ ಮತ್ತೇನಾದರೂ ಅನಾಹುತ ಸಂಭವಿಸಬಹುದೋ ಎಂದು ಹೆದರಿಕೊಂಡು ಸಲೀಮ್ ಹಿಂದುಗಾಲಲ್ಲೇ ಹೊರನಡೆದಿದ್ದ. ಪಾಪದ ಹಮೀದ್ ಹೆದರಿಕೊಂಡು